ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 80-85
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕೃಷಿ ವ್ಯವಸ್ಥೆಯ ಮೇಲೆ ಕೃಷಿ ಕಾರ್ಮಿಕರ ವಲಸೆಯ ಪರಿಣಾಮಗಳು

**ಮಾಂತೇಶ ದಳವಾಯಿ**

ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

***Abstract:***

*ಕೃಷಿ ಕಾರ್ಮಿಕರ ವಲಸೆಯು ಕೃಷಿ ಕ್ಷೇತ್ರದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತಿದೆ. ಈ ಸಂಶೋಧನೆಯು ಕೃಷಿ ಪದ್ಧತಿಗಳು, ಉತ್ಪಾದಕತೆ ಮತ್ತು ಗ್ರಾಮೀಣ ಸಮುದಾಯಗಳ ಸಾಮಾಜಿಕ–ಆರ್ಥಿಕ ರಚನೆಯ ಮೇಲೆ ಕೃಷಿ ಕಾರ್ಮಿಕರ ವಲಸೆಯ ಸಂಕೀರ್ಣ ಪರಿಣಾಮಗಳನ್ನು ಬಿಚ್ಚಿಡಲು ಪ್ರಯತ್ನಿಸುತ್ತದೆ. ಈ ಅಧ್ಯಯನವು ಕೃಷಿ ವಲಯದೊಳಗೆ ಕಾರ್ಮಿಕ ವಲಸೆಯ ಕಾರಣಗಳೇನು? ಕೃಷಿ ಕಾರ್ಮಿಕರ ವಲಸೆಯಿಂದ ಉಂಟಾಗುವ ಸವಾಲುಗಳೇನು? ಸ್ಥಳೀಯ ಆರ್ಥಿಕತೆಗಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸುವ ಮೂಲಕ, ಸುಸ್ಥಿರ ಕೃಷಿ ಅಭಿವೃದ್ಧಿಗೆ ವ್ಯಾಪಕವಾದ ಪರಿಣಾಮಗಳ ಬಗ್ಗೆ ಒಳನೋಟಗಳನ್ನು ನೀಡಲು ಈ ಅಧ್ಯಯನವು ಪ್ರಯತ್ನಿಸುತ್ತದೆ.*

***Keywords:*** *ಬಡತನ, ನಿರುದ್ಯೋಗ, ವಲಸೆ, ಕೃಷಿಕಾರ್ಮಿಕರು, ಕೃಷಿ ವ್ಯವಸ್ಥೆ.*

## ಪೀಠಿಕೆ

ಮಾನವ ನಾಗರಿಕತೆಯ ಅಡಿಪಾಯದ ಆಧಾರಸ್ತಂಭವಾದ ಕೃಷಿಯು ಸಾವಿರಾರು ವರ್ಷಗಳಲ್ಲಿ ರೂಪಾಂತರಗಳಿಗೆ ಒಳಗಾಗಿದೆ, ತಾಂತ್ರಿಕ ಪ್ರಗತಿಯಿಂದ ಸಾಮಾಜಿಕ–ಆರ್ಥಿಕ ಪಲ್ಲಟಗಳವರೆಗಿನ ಅಸಂಖ್ಯಾತ ಅಂಶಗಳಿಂದ ಪ್ರಭಾವಿತವಾಗಿದೆ. ಇತ್ತೀಚಿನ ದಿನಗಳಲ್ಲಿ ಪ್ರಾಮುಖ್ಯತೆ ಪಡೆದ ಅಂತಹ ಪರಿವರ್ತಕ ಶಕ್ತಿಯೆಂದರೆ ಕೃಷಿ ಕಾರ್ಮಿಕರ ವಲಸೆ. ಕೃಷಿ ಪ್ರದೇಶಗಳ ಒಳಗೆ ಮತ್ತು ಅದರಾದ್ಯಂತ ಕಾರ್ಮಿಕರ ಚಲನೆಯು ಒಂದು ವಿದ್ಯಮಾನವಾಗಿದೆ, ಇದು ಕೃಷಿ ಪದ್ಧತಿಗಳು, ಗ್ರಾಮೀಣ ಸಮುದಾಯಗಳು ಮತ್ತು ಕೃಷಿ ವ್ಯವಸ್ಥೆಗಳ ಸುಸ್ಥಿರತೆಯ ಮೂಲಭೂತವಾಗಿ ದೂರಗಾಮಿ ಪರಿಣಾಮಗಳನ್ನು ಹೊಂದಿದೆ.

ಕೃಷಿ ಕಾರ್ಮಿಕರ ವಲಸೆಯ ಚಲನಶೀಲತೆಯು ಆರ್ಥಿಕ, ಸಾಮಾಜಿಕ ಮತ್ತು ಪರಿಸರ ಅಂಶಗಳ ಸಂಕೀರ್ಣ ಪರಸ್ಪರ ಕ್ರಿಯೆಯಿಂದ ರೂಪುಗೊಂಡಿದೆ. ಸಮಕಾಲೀನ ಸಂದರ್ಭದಲ್ಲಿ ಕೃಷಿ ಉತ್ಪನ್ನಗಳಿಗೆ ಜಾಗತಿಕ ಬೇಡಿಕೆ ಹೆಚ್ಚುತ್ತಲೇ ಇದೆ, ಕೃಷಿ ಪ್ರದೇಶಗಳ ಒಳಗೆ ಮತ್ತು ನಡುವೆ ಕಾರ್ಮಿಕರ ಚಲನೆಯು ವಲಯದ ವಿಶಿಷ್ಟ ಲಕ್ಷಣವಾಗಿದೆ.

## ಅಧ್ಯಯನ ಉದ್ದೇಶಗಳು

- ಕೃಷಿ ಕಾರ್ಮಿಕರ ವಲಸೆಗೆ ಕಾರಣಗಳನ್ನು ಅಧ್ಯಯನ ಮಾಡುವುದು
- ಕೃಷಿಕಾರ್ಮಿಕರ ವಲಸೆಯಿಂದ ಕೃಷಿವ್ಯವಸ್ಥೆಯ ಮೇಲಾದ ಪರಿಣಾಮವೇನು ಎಂಬುದನ್ನು ವಿಮರ್ಶಿಸುವುದು.

## ಅಧ್ಯಯನ ವಿಧಾನಗಳು

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಮಾಹಿತಿ

***Please cite this article as:*** ಮಾಂತೇಶ ದಳವಾಯಿ. (2023). ಸವಿತಾ ನಾಗಭೂಷಣ ಅವರ 'ದೇವರಿಗೆ ಹೋದೆವು' ಮತ್ತು 'ಜಾತ್ರೆಯಲ್ಲಿ ಶಿವ' ಕವನ ಸಂಕಲನಗಳಲ್ಲಿ ಆಯ್ದ ಕವಿತೆಗಳ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(5), 80–85.

ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಸಮಾಜಶಾಸ್ತ್ರೀಯ ಮತ್ತು ಮಾನವಶಾಸ್ತ್ರೀಯ ಸಂಶೋಧನಾ ವಿಧಾನಗಳಾದ ಕ್ಷೇತ್ರಕಾರ್ಯ, ಅವಲೋಕನ, ಸಂದರ್ಶನ, ಪ್ರಕರಣ ಅಧ್ಯಯನ, ಗುಂಪುಚರ್ಚೆ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ. ಮಾಧ್ಯಮಿಕ ಮಾಹಿತಿಯನ್ನು ಸಂಶೋಧನಾ ಗ್ರಂಥಗಳು, ಲೇಖನಗಳು, ವರದಿಗಳು, ದಾಖಲೆಗಳು ಮತ್ತು ಅಂತರ್ಜಾಲದ ಮೂಲಕ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**ಅಧ್ಯಯನ ಕ್ಷೇತ್ರ**

ಪ್ರಸ್ತುತ ಅಧ್ಯಯನಕ್ಕೆ ಬಾಗಲಕೋಟೆ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಬಾಗಲಕೋಟೆ ಜಿಲ್ಲೆಯು ಕರ್ನಾಟಕ ರಾಜ್ಯದ ಪ್ರಮುಖ ಕೃಷಿ ಪ್ರಧಾನವಾದ ಜಿಲ್ಲೆಗಳಲ್ಲಿ ಒಂದಾಗಿದೆ.

**ವಿಷಯ ಮಂಡನೆ**

ಕೃಷಿಯು ಭಾರತೀಯರ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಆದರೂ ಕೂಡ ಇತ್ತೀಚಿನ ದಿನಗಳಲ್ಲಿ ಕೃಷಿಕ್ಷೇತ್ರದಿಂದ ವಿಮುಖರಾಗುತ್ತಿರುವವರ ಪ್ರಮಾಣ ಅಧಿಕವಾಗಿ ಕೃಷಿ ಕಾರ್ಮಿಕರ ವಲಸೆ ಸಾಮಾನ್ಯವಾಗಿದೆ. ಕೃಷಿ ಕಾರ್ಮಿಕರ ವಲಸೆಗೆ ಮೇಲ್ನೋಟಕ್ಕೆ ಹಲವಾರು ಕಾರಣಗಳು ಗೋಚರಿಸಿದರೂ ಮೂಲ ಕಾರಣ ಆರ್ಥಿಕ ಅಸಮಾನತೆ, ಹೆಚ್ಚುತ್ತಿರುವ ಜನಸಂಖ್ಯೆ ಪ್ರಮುಖವಾಗಿದೆ. ಕೃಷಿ ಕಾರ್ಮಿಕರ ವಲಸೆಯು ಕೃಷಿ ಚಟುವಟಿಕೆಗಳ ದೈನಂದಿನ ಲಯಗಳ ಮೇಲೆ ಪ್ರಭಾವ ಬೀರುತ್ತದೆ, ನಾಟಿಯಿಂದ ಕೊಯ್ಲು ಮಾಡುವವರೆಗೆ ಮತ್ತು ಕೃಷಿ ಪದ್ಧತಿಗಳ ಸ್ವರೂಪದ ಮೇಲೆ ಪರಿಣಾಮ ಬೀರುತ್ತಿದೆ. ವ್ಯಕ್ತಿಗಳು ಮತ್ತು ಕುಟುಂಬಗಳು ಜೀವನೋಪಾಯಕ್ಕಾಗಿ ಕೃಷಿ ಕ್ಷೇತ್ರದಲ್ಲಿ ಉದ್ಯೋಗ ದೊರೆಯದಿದ್ದಾಗ ಅಥವ ನಗರ ಪ್ರದೇಶಗಳ ಉತ್ತಮ ಅವಕಾಶಗಳಿಂದಾಗಿ ವಲಸೆ ಅನಿವಾರ್ಯವಾಗುತ್ತಿದೆ.

ಬಾಗಲಕೋಟೆ ಜಿಲ್ಲೆಯು ಅರ್ಧದಷ್ಟು ನೀರಾವಾರಿ ಪ್ರದೇಶದಿಂದ ಕೂಡಿದ್ದರೆ ಇನ್ನುಳಿದ ಅರ್ಧ ಪ್ರದೇಶ ಮಳೆಯಾಶ್ರಿತ ಬೇಸಾಯದ ಪ್ರದೇಶವಾಗಿದೆ. ಇತ್ತೀಚಿನ ದಿನಮಾನಗಳಲ್ಲಿ ಹೆಚ್ಚುತ್ತಿರುವ ಬರಗಾಲ ಪರಿಸ್ಥಿತಿಯಿಂದಾಗಿ ಕೃಷಿಕ್ಷೇತ್ರದಲ್ಲಿ ಉಂಟಾಗುತ್ತಿರುವ ಹಾನಿ ಮತ್ತು ಹೆಚ್ಚುತ್ತಿರುವ ಕೃಷಿವೆಚ್ಚದಿಂದಾಗಿ ರೈತಾಪಿ ಕುಟುಂಬಗಳನ್ನು ಕಂಗೆಡುವಂತೆ ಮಾಡಿದೆ. ಇದರಿಂದಾಗಿ ರೈತಾಪಿ ಕುಟುಂಬಗಳ ಯುವಕರು ಉದ್ಯೋಗ ಅರಸಿ ದೂರದ ಊರುಗಳಿಗೆ ವಲಸೆ ಹೋಗುವಂತಾಗಿದೆ.

**ಕೃಷಿ ಕಾರ್ಮಿಕರ ವಲಸೆಗೆ ಕಾರಣಗಳು**

ಸಾಮಾನ್ಯವಾಗಿ ಕೃಷಿ ಕಾರ್ಮಿಕರ ವಲಸೆಯು ಭೌಗೋಳಿಕ ಪ್ರದೇಶಗಳು ಮತ್ತು ಸಾಮಾಜಿಕ ಸಂದರ್ಭಗಳಲ್ಲಿ ಬದಲಾಗುವ ಅಂಶಗಳ ಸಂಯೋಜನೆಯಿಂದ ಪ್ರಭಾವಿತವಾಗಿರುತ್ತದೆ. ಕೃಷಿ ಕಾರ್ಮಿಕರ ವಲಸೆಗೆ ಕೆಲವು ಸಾಮಾನ್ಯ ಕಾರಣಗಳಿವೆ.

ಉತ್ತಮ ಆರ್ಥಿಕ ಅವಕಾಶಗಳ ಅನ್ವೇಷಣೆಯು ಕಾರ್ಮಿಕರ ವಲಸೆಯ ಪ್ರಾಥಮಿಕ ಚಾಲಕಗಳಲ್ಲಿ ಒಂದಾಗಿದೆ. ಕೃಷಿ ಕಾರ್ಮಿಕರಿಗೆ ಹೆಚ್ಚಿನ ಬೇಡಿಕೆ ಇರುವ ಪ್ರದೇಶಗಳಿಗೆ ಕಾರ್ಮಿಕರು ವಲಸೆ ಹೋಗಬಹುದು, ಇದು ಹೆಚ್ಚಿದ ವೇತನ ಮತ್ತು ಸುಧಾರಿತ ಜೀವನಮಟ್ಟಗಳ ನಿರೀಕ್ಷೆಗೆ ಕಾರಣವಾಗುತ್ತದೆ. ಇದಲ್ಲದೆ ಕೃಷಿಯು ಸಾಮಾನ್ಯವಾಗಿ ನಾಟಿ ಮತ್ತು ಕೊಯ್ಲು ಮುಂತಾದ ಋತುಮಾನದ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಕಾರ್ಮಿಕರು ತಾತ್ಕಾಲಿಕ, ಕಾಲೋಚಿತ ಕೆಲಸಕ್ಕೆ ಬೇಡಿಕೆಯಿರುವ ಪ್ರದೇಶಗಳಿಗೆ ವಲಸೆ ಹೋಗಬಹುದು, ಇದು ವರ್ಷವಿಡೀ ತಮ್ಮ ಉದ್ಯೋಗಾವಕಾಶಗಳನ್ನು ಗರಿಷ್ಠಗೊಳಿಸಲು ಅನುವು ಮಾಡಿಕೊಡುತ್ತದೆ.

ಯಾಂತ್ರೀಕರಣ ಮತ್ತು ಆಧುನಿಕ ಕೃಷಿ ತಂತ್ರಜ್ಞಾನಗಳ ಅಳವಡಿಕೆಯು ಕಾರ್ಮಿಕರ ಬೇಡಿಕೆಯನ್ನು ಕಡಿಮೆಗೊಳಿಸುತ್ತಿದೆ. ಇದಲ್ಲದೆ ನಿರ್ದಿಷ್ಟ ಬೆಳೆಗಳು ಮತ್ತು ಇತರೆ ಕೃಷಿ ಉತ್ಪನ್ನಗಳಿಗೆ ಕಡಿಮೆ ಬೇಡಿಕೆ, ವಿಭಜಿತ ಭೂ ಹಿಡುವಳಿಗಳಿಂದಾಗಿ ಕಾರ್ಮಿಕರ ವಲಸೆ ಕಾರ್ಮಿಕರ ಬೇಡಿಕೆ ಹೆಚ್ಚಿರುವ ಪ್ರದೇಶಗಳಿಗೆ ಕಾರ್ಮಿಕರು ವಲಸೆ ಹೋಗುವುದು ಅಧ್ಯಯನ ಕ್ಷೇತ್ರದಲ್ಲಿ ಕಂಡುಬಂದಿದೆ. ಬರ, ಪ್ರವಾಹ ಅಥವಾ ಪರಿಸರ ಅಸಮತೋಲನ ಪ್ರದೇಶದಿಂದ ಅನುಕೂಲಕರವಾದ ಹವಾಮಾನ ಪರಿಸ್ಥಿತಿಯಿರುವ ಪ್ರದೇಶಗಳಿಗೆ ವಲಸೆ ಹೋಗುವುದು ಕೂಡ ಕಂಡು ಬಂದಿದೆ.

**ಹೆಚ್ಚುತ್ತಿರುವ ಅಧಿಕ ವೆಚ್ಚ**

ಕೃಷಿ ಉತ್ಪಾದನೆಯಲ್ಲಿ ಹೆಚ್ಚುತ್ತಿರುವ ವೆಚ್ಚವು ಬಾಗಲಕೋಟೆ ಜಿಲ್ಲೆಯ ರೈತಾಪಿ ಕುಟುಂಬಗಳ ಯುವಕರು ವಲಸೆ ಹೋಗುವುದಕ್ಕೆ ಪ್ರಮುಖ ಕಾರಣವಾಗಿದೆ. ಜೊಡೆತ್ತುಗಳನ್ನು ಬಳಸಿ ಕೃಷಿ ಚಟುವಟಿಕೆಗಳನ್ನು ನಡೆಸುತ್ತಿದ್ದ ರೈತರ ಮನೆಯಲ್ಲೀಗ ಟ್ರ್ಯಾಕ್ಟರಗಳು ಬಂದಿವೆ. ಇದರಿಂದಾಗಿ ಕೊಟ್ಟಿಗೆ ಗೊಬ್ಬರದ ಜಾಗದಲ್ಲಿ ರಾಸಾಯನಿಕ ಗೊಬ್ಬರಗಳ ಚೀಲಗಳು ಬಂದು ಕುಳಿತಿವೆ. ರೈತರ ಉಪಕಸುಬುಗಳಾದ ಹಸು, ಕುರಿ, ಮೇಕೆ, ಕೋಳಿ ಸಾಕಣಿಕೆ ಕಣ್ಮರೆಯಾಗುತ್ತಿವೆ. ಪ್ರತಿಯೊಂದು ಕೆಲಸಕ್ಕೊ ಇಂದು ದುಡ್ಡು ಕೊಡಬೇಕಾದ ಪರಿಸ್ಥಿತಿಯಿಂದಾಗಿ ರೈತಾಪಿ ವರ್ಗದಲ್ಲಿ ನಿಧಾನವಾಗಿ ಕೃಷಿ ಉತ್ಪಾದನಾ ವೆಚ್ಚ ದಿನದಿಂದ ದಿನಕ್ಕೆ ಅಧಿಕವಾಗುತ್ತಲೇ ಸಾಗುತ್ತಿದೆ.

ಹತ್ತು ವರ್ಷಗಳ ಹಿಂದೆ ರಾಸಾಯನಿಕ ಗೊಬ್ಬರಗಳನ್ನು ಪರಿಚಯಿಸಿದಾಗ ಪ್ರತಿ 50 ಕೆಜಿ ಡಿಎಪಿ ಗೊಬ್ಬರಕ್ಕೆ 600 ರೂಪಾಯಿಗೆ ಹಾಗೂ ಕಾಂಪೂಸಿಟ್ ಗೊಬ್ಬರ 400 ರಿಂದ 500 ರೂಪಾಯಿಗಳಿಗೆ ದೊರೆಯುತ್ತಿತ್ತು. ಆದರೆ ಕಳೆದ ಕೆಲವು ವರ್ಷಗಳಿಂದ ಸಬ್ಸಿಡಿ ಪ್ರಮಾಣ ಕಡಿಮೆ ಮಾಡಿರುವುದರಿಂದ ಮತ್ತು ಕಚ್ಚಾ ವಸ್ತುಗಳ ಬೆಲೆ ಏರಿಕೆಯಿಂದಾಗಿ ಗೊಬ್ಬರ ಉತ್ಪಾದನೆಯ ವೆಚ್ಚವೂ ಅಧಿಕವಾಗಿ ಪ್ರಸ್ತುತ ಡಿಎಪಿ ಪ್ರತಿ 50ಕೆಜಿ ಚಿಲಕ್ಕೆ 1200–1400, ಕಾಂಪೂಸಿಟ್ ಗೊಬ್ಬರದ ಬೆಲೆ 800–1200 ರೂಪಾಯಿಗಳಿಗೆ ಏರಿಕೆಯಾಗಿದೆ. ಜಾನುವಾರುಗಳ ಸಾಕಾಣಿಕೆ ಕಡಿಮೆಯಾದ ಪರಿಣಾಮ ಕೊಟ್ಟಿಗೆ ಗೊಬ್ಬರದ ಲಭ್ಯತೆಯೂ ಕೂಡಾ ಕಡಿಮೆಯಾಗಿರುವ ಕಾರಣ ರೈತರು ಅನಿವಾರ್ಯವಾಗಿ ಹೆಚ್ಚು ಬೆಲೆ ಕೊಟ್ಟು ಗೊಬ್ಬರ ಖರೀದಿಸಿಬೇಕಾಗಿದೆ.

ಇನ್ನು ಜೊಡೆತ್ತುಗಳ ಜಾಗಕ್ಕೆ ಟ್ರ್ಯಾಕ್ಟರಗಳು ಬಂದಿದ್ದು ಡಿಸೇಲ್‌ದರ ಕಳೆದ ಎರಡು ಮೂರು ವರ್ಷಗಳಲ್ಲಿ ಅತ್ಯಧಿಕವಾಗಿದೆ. ಟ್ರ್ಯಾಕ್ಟರ ಹೊಂದದ ರೈತರು ಬಾಡಿಗೆ ಟ್ರ್ಯಾಕ್ಟರ್ ಮೇಲೆ ಅವಲಂಬಿತರಾಗಿದ್ದು, ಕಳೆದ ಎರಡು ವರ್ಷಗಳ ಹಿಂದೆ ಪ್ರತಿ ಎಕರೆ/ಗಂಟೆ ಉಳುಮೆಗೆ 300 ರಿಂದ 400 ರೂಪಾಯಿ ಬಾಡಿಗೆ ಪಡೆಯುತ್ತಿದ್ದರು. ಆದರೆ ಪ್ರಸ್ತುತ 500 ರಿಂದ 600 ರೂ ಆಗಿದೆ. ಜೋಡ ಪಳ ನೇಗಿಲು 1000–1500 ಇದ್ದದ್ದು 2000–2500, ಒಂಟಿಪಳ 2000–2500 ಇದ್ದದ್ದು 4000–5000 ರೂಪಾಯಿ ಬಾಡಿಗೆ ಪಡೆಯುತ್ತಿದ್ದಾರೆ. ಇದರ ನೇರ ಪರಿಣಾಮ ಉತ್ಪಾದನಾ ಕ್ಷೇತ್ರದ ಮೇಲುಂಟಾಗುತ್ತದೆ. ಉತ್ಪಾದನ ವೆಚ್ಚ ಹೆಚ್ಚಿರುವುದ್ದರಿಂದ ಲಾಭ ಅತ್ಯಂತ ಕಡಿಮೆಯಾಗಿದೆ. ಇದಲ್ಲದೆ ಸಾಲ ಮಾಡಿ ಕೃಷಿ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು ರೈತಾಪಿ ವರ್ಗದ ಯುವಕರನ್ನು ವಲಸೆಗೆ ದೂಡುತ್ತಿದೆ.

ಬಾಗಲಕೋಟೆ ಜಿಲ್ಲೆಯ 50% ನೀರಾವರಿ ಪ್ರದೇಶದ ಕೃಷಿಯೂ ಕೂಡಾ ಒಣ ಬೇಸಾಯ ಪ್ರದೇಶದ ಕೃಷಿಕೂಲಿ ಕಾರ್ಮಿಕರನ್ನು ಅವಲಂಬಿಸಿದೆ. ಆದರೆ ಕೃಷಿ ಕಾರ್ಮಿಕರ ವಲಸೆಯ ಕಾರಣದಿಂದಾಗಿ ಒಣಬೇಸಾಯ ಮತ್ತು ನೀರಾವರಿ ಬೇಸಾಯಕ್ಕೂ ಕೂಡ ಕಾರ್ಮಿಕರ ಕೊರತೆ ಎದುರಾಗಿದೆ. ಇದರೊಂದಿಗೆ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದಾಗಿ ಒಣ ಬೇಸಾಯದ ಪ್ರದೇಶಗಳಾದ ಬಾದಾಮಿ, ಗುಳೇದಗುಡ್ಡ, ಜಮಖಂಡಿ ಮತ್ತು ಬಾಗಲಕೋಟೆ ತಾಲೂಕಿನ ರೈತಾಪಿ ವರ್ಗ ಅತ್ಯಂತ ಕೆಳಹಂತಕ್ಕೆ ತಲುಪಿವೆ.

ಜಿಲ್ಲೆಯಲ್ಲಿ ಮಲಪ್ರಭೆ, ಘಟಪ್ರಭೆ, ಕೃಷ್ಣೇ ಸೇರಿದಂತೆ ಜೀವನದಿಗಳ ಅಚುಕಟ್ಟು ಪ್ರದೇಶಗಳಿದ್ದು ಇವುಗಳ ತಟದಲ್ಲಿ ಜಾನುವಾರುಗಳಿಗೆ ಅತ್ಯಧಿಕವಾಗಿ ಮೇವಿನ ಲಭ್ಯತೆಯಿದ್ದರೂ ಜಾನುವಾರುಗಳಿಗೆ ಭಾದಿಸುತ್ತಿರುವ ಸಾಂಕ್ರಾಮಿಕ ರೋಗಗಳಿಂದಾಗಿ ಜಾನುವಾರು ಸಾಕಾಣಿಕೆಯಲ್ಲಿಯೂ ಹಾನಿ ಅನುಭವಿಸುವಂತಾಗಿದ್ದು ಜಿಲ್ಲೆಯ ಜಾನುವಾರು ಮಾರುಕಟ್ಟೆಗಳು ಸಹ ಇಂದು ಮೊದಲಿನಂತೆ ಸಮೃದ್ಧ ವ್ಯಾಪಾರ ಕ್ಷೇತ್ರವಾಗಿ ಉಳಿದಿಲ್ಲ.

ಹಸು, ಎಮ್ಮೆ, ಮೇಕೆ, ಕೋಳಿ, ಸಾಕಾಣಿಕೆಗಳಿಂದ ಫಲವತ್ತಾದ ಗೊಬ್ಬರಗಳ ಜೊತೆಗೆ ಹಾಲು ಮೊಸರು ಬೆಣ್ಣೆ ಮೊಟ್ಟೆ ಮಾಂಸ ಉಣ್ಣೆಯಂತಹ ಉಪವಸ್ತುಗಳು ದೊರೆಯುತ್ತಿದ್ದು ರೈತರ ಸಾಮಾನ್ಯ ಖರ್ಚುವೆಚ್ಚಗಳನ್ನು ತಕ್ಕಮಟ್ಟಿಗೆ ನಿಭಾಯಿಸುವುದರ ಜೊತೆಗೆ ಮನೆಯ ಆಹಾರದ ಖರ್ಚುನ್ನು ಕಡಿಮೆ ಮಾಡುತ್ತಿದ್ದವು. ಆದರೆ ಜಾನುವಾರುಗಳಿಗೆ ತಗಲುವ ಸಾಂಕ್ರಾಮಿಕ ರೋಗಗಳಿಂದಾಗಿ ಹೈನುಗಾರಿಕೆ ಅವಲಂಬಿತರ ಪ್ರಮಾಣ ಕೂಡ ಕಡಿಮೆಯಾಗಿದೆ.

ಸರಕಾರ ಕೂಡಾ ಜಾನುವಾರುಗಳ ಸಾಕಾಣಿಕೆ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಹಲವು ಮಹತ್ವದ ಯೋಜನೆಗಳನ್ನು ಜಾರಿಗೆ ತಂದರೂ ಪ್ರಯೋಜನ ಮಾತ್ರ ಅತ್ಯಂತ ಕನಿಷ್ಠ ಮಟ್ಟದಲ್ಲಿದೆ ಇದಕ್ಕೆ ಪ್ರಮುಖ ಕಾರಣ ಸರ್ಕಾರದ ಯೋಜನೆಗಳಲ್ಲಿನ ಹಲವು ತೊಡಕುಗಳು ಮತ್ತು ಸೂಕ್ತ ಪ್ರಚಾರದ ಕೊರತೆ ಪ್ರಮುಖ ಕಾರಣವಾಗಿದೆ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಅಂಬೇಡ್ಕರ್ ಅಭಿವೃದ್ಧಿ ನಿಗಮ, ವಾಲ್ಮೀಕಿ ಅಭಿವೃದ್ಧಿ ನಿಗಮಗಳು ಸೇರಿದಂತೆ ಕೃಷಿ ಇಲಾಖೆ, ಪಶುಸಂಗೋಪನೆ ಇಲಾಖೆ, ನಬಾರ್ಡ್ ಮುಂತಾದ ಇಲಾಖೆ ಮತ್ತು ಹಣಕಾಸು ಸಂಸ್ಥೆಗಳು ಜಾನುವಾರು ಸಾಕಾಣಿಕೆಗೆ ಸಂಭಂದಿಸಿದಂತೆ ಸೂಕ್ತ ಯೋಜನೆಗಳ ಬಗೆಗೆ ಪ್ರಚಾರವನ್ನು ನಡಸದೇ ಇರುವುದರಿಂದ ಹಾಗೂ ವಿವಿಧ ದಾಖಲೆಗಳನ್ನು ರೈತರಿಂದ ನಿರೀಕ್ಷಿಸುತ್ತಿರುವುದರಿಂದ ಜಾನುವಾರು ಸಾಕಾಣಿಕೆಗೆ ಸಂಬಂಧಿಸಿದ ಯೋಜನೆಗಳು ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ವಿಯಾಗಿಲ್ಲ ಇದರಿಂದಾಗಿಯೊ ಕೃಷಿ ಉತ್ಪಾದನಾ ವೆಚ್ಚ ದಿನದಿಂದ ದಿನಕ್ಕೆ ಮತ್ತು ವರ್ಷದಿಂದ ವರ್ಷಕ್ಕೆ ಅಧಿಕವಾಗುತ್ತಾ ಸಾಗುತ್ತಿದ್ದು ಈ ವೆಚ್ಚಗಳನ್ನು ಭರಿಸಲಾಗದೇ ರೈತಾಪಿ ವರ್ಗದ ಜನ ವಲಸೆ ಹೋಗುತ್ತಿದ್ದಾರೆ.

**ಕೈಹಿಡಿಯದ ಸರ್ಕಾರಿ ಯೋಜನೆಗಳು**

ಜಿಲ್ಲೆಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಹಲವು ಕೃಷಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲಾಗಿದ್ದರೂ ಸಹ ರೈತರ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಸರ್ಕಾರಿ ಯೋಜನೆಗಳು ಸಫಲವಾಗದಿರುವುದು ಖೇದಕರವಾಗಿದೆ. ಜಿಲ್ಲೆಯಲ್ಲಿ ಕೃಷಿ ಇಲಾಖೆ ಯಂತ್ರಧಾರೆ ಯೋಜನೆಯನ್ನು ಕರ್ನಾಟಕ ಸರ್ಕಾರದ ಸಹಯೋಗದಲ್ಲಿ ಸ್ಥಾಪಿಸಿದ್ದರೂ ಸಹ ಇದರ ಬಗ್ಗೆ ರೈತರಲ್ಲಿ ಮಾಹಿತಿ ಕೊರತೆ ಜೊತೆಗೆ ಯಂತ್ರಧಾರೆಯ ಯೋಜನೆಯನ್ನು ಸಮರ್ಪಕವಾಗಿ ಅಳವಡಿಸಿ ಬಹು ರೈತರಿಗೆ ಉಪಯೋಗವಾಗುವ ನಿಟ್ಟಿನಲ್ಲಿ ಕೃಷಿ ಇಲಾಖೆ ರಚನಾತ್ಮಕ ಕಾರ್ಯರೂಪಿಸುವಲ್ಲಿ ವಿಫಲವಾಗಿದೆ ಎಂಬುವುದು ಜಿಲ್ಲೆಯ ಕೆಲವು ಪ್ರಗತಿಪರ ರೈತರ ಆರೋಪವಾಗಿದೆ. ಜೊತೆಗೆ ರಾಜ್ಯ ಸರ್ಕಾರ ಸ್ಥಾಪಿಸಿರುವ ತೋಟಗಾರಿಕೆ ವಿಶ್ವವಿದ್ಯಾಲಯವೂ ಕೇವಲ ತೋಟಗಾರಿಕೆ ಬೆಳೆಗಳಿಗೆ ಸೀಮಿತವಾಗಿರುವುದರಿಂದ ಜಿಲ್ಲೆಯ ಭಾಗಶಃ ರೈತರು ಇದರಿಂದ ಯಾವುದೇ ಅನುಕೂಲಗಳನ್ನು ಪಡೆಯಲು ಸಾದ್ಯವಾಗುತ್ತಿಲ್ಲ ಎಂಬ ಅಪವಾದಗಳು ರೈತರಿಂದ ಕೇಳಿ ಬರುತ್ತಿವೆ.

ಪ್ರಸ್ತುತ ವರ್ಷದ ಮುಂಗಾರು ಮತ್ತು ಹಿಂಗಾರಿನ ಹಂಗಾಮುಗಳಲ್ಲಿ ಬರ ಎದುರಾಗಿದ್ದು ಜಿಲ್ಲೆಯಲ್ಲಿ ಪ್ರವಾಹಿಸುವ ಬಹುತೇಕ ನದಿಗಳಲ್ಲಿ ನೀರಿನ ಪ್ರಮಾಣ ಅತ್ಯಧಿಕ ಪ್ರಮಾಣದಲ್ಲಿ ಕಡಿಮೆಯಾಗಿದೆ. ಇದರಿಂದಾಗಿ ಪ್ರಮುಖ ಬೆಳೆಗಳಾದ ಮೆಕ್ಕೆಜೋಳ, ಕಬ್ಬು, ಶೇಂಗಾ, ಸಜ್ಜೆ ಸೇರಿದಂತೆ ಹಲವಾರು ಬೆಳೆಗಳು ನೀರಿನ ಅಭಾವ ಎದುರಿಸುತ್ತಿವೆ ಸರ್ಕಾರದ ಗಂಗಾ ಕಲ್ಯಾಣ ಯೋಜನೆಯಡಿ ಸೇರಿದಂತೆ ಹಲವು ರೈತರು ಕೊಳವೆ ಭಾವಿಯ ನೀರನ್ನು ಹಾಯಿಸಿ ಬೆಳೆ ಬೆಳೆಯಲು ಮುಂದಾದರೂ ವಿದ್ಯುಚ್ಚಕ್ತಿ ಇಲಾಖೆಯು ಅಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡುತ್ತಿದ್ದು ರೈತರಿಗೆ ಇದ್ದ ಕೊನೆಯ ಅವಕಾಶ ಕೂಡಾ ಲೋಡ್‌ಶೆಡ್ಡಿಂಗ್‌ನಿಂದಾಗಿ ವಂಚಿತವಾಗುತ್ತಿದೆ ಮತ್ತೊಂದೆಡೆ ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳು ರೈತರಿಗೆ ನೀಡಿದ ಬೆಲೆ ಸಾಲದ ವಸೂಲಾತಿಗೆ ನೋಟಿಸ್ ನೀಡುತ್ತಿದ್ದು ರೈತಾಪಿ ವರ್ಗವನ್ನು ಚಿಂತೆಗೆ ದೂಡುವಂತಾಗಿದೆ.

ಈ ಮೇಲಿನ ಕಾರಣಗಳಿಂದಾಗಿ ಬಾಗಲಕೋಟೆ ಜಿಲ್ಲೆಯ ರೈತರ ಸಮಸ್ಯೆಗಳಿಗೆ ವಲಸೆ ಹೋಗುವುದು ಒಂದೇ ಪರಿಹಾರ ಎಂಬ ಮನಸ್ಥಿತಿ ಯುವಕರಲ್ಲಿ ಮೂಡುತ್ತಿದ್ದು ರೈತಾಪಿ ಕೆಲಸಕಾರ್ಯಗಳನ್ನು ತೊರೆದು ದೂರದ ಸಾಂಗ್ಲಿ, ಸೊಲ್ಲಾಪುರ, ಪುಣೆ, ಗೋವಾ, ಮಂಗಳೂರಿನಂಹ ಊರುಗಳಿಗೆ ಕೆಲಸ ಹರಸಿ ಹೋಗುವಂತೆ ಮಾಡುತ್ತಿದೆ. ಬರ ಉತ್ಪಾದನಾ ವೆಚ್ಚದಲ್ಲಾದ ಹೆಚ್ಚಳ ಕೂಲಿ ಕಾರ್ಮಿಕರ ಕೊರತೆ ಕೈಹಿಡಿಯದ ಸರ್ಕಾರಿ ಯೋಜನೆಗಳು ಬ್ಯಾಂಕುಗಗಳ ಸಾಲ ವಸೂಲಾತಿ ಕಿರುಕುಳದ ಜೊತೆಗೆ ಮನೆತನಗಳ ಖರ್ಚು ನಿಭಾಯಿಸುವುದು ರೈತಾಪಿ ವರ್ಗಗಳಿಗೆ ದೊಡ್ಡ ಹೊರೆಯಾಗಿ ಪರಿಣಮಿಸುತ್ತಿರುವ ಕಾರಣದಿಂದಾಗಿ ವಲಸೆಗೆ ಮಾರುಹೋಗುತ್ತಿದ್ದು ಇದ್ದ ಜಮೀನುಗಳನ್ನು ಪಾಳು ಬಿಟ್ಟು ಅಥವಾ ಲವಣಿ ಕೊಟ್ಟು ಊರು ಬಿಟ್ಟು ದುಡಿಯಲು ಅನ್ಯ ಉದ್ಯೋಗಗಳನ್ನು ಹುಡುಕುತ್ತಾ ಸಾಗುತ್ತಿರುವುದು ಇವರಿಗೆ ಅನಿವಾರ್ಯದ ಜೊತೆಜೊತೆಗೆ ಅವಶ್ಯಕವಾಗಿದೆ.

ನೀರಾವರಿ ಇಲಾಖೆ ಕೊಡಮಾಡುವ ತುಂತುರು ನೀರಾವರಿ, ಹನಿ ನೀರಾವರಿ ಮತ್ತು ಸಣ್ಣ ನೀರಿನ ಟೇಪುಗಳು, ಹಂಚಿಕೆ, ಬಿತ್ತನೆ ಕೂರಿಗೆ, ಮಡಿಕೆ ಹೊಡೆಯುವ ಕುಂಟೆ ಕೂರಿಗೆ ಟ್ರ್ಯಾಕ್ಟರ್, ಪವರ್ ಟಿಲ್ಲರ್ ಒಕ್ಕಣೆ ಯಂತ್ರ ಕಳೆ ತೆಗೆದು ಎಡೆಹೊಡೆಯುವ ಯಂತ್ರಗಳಿಗೆ ಸರ್ಕಾರ ನೀಡುವ ಸಬ್ಸಡಿಗಳು ರೈತರಿಗೆ ಸಮರ್ಪಕವಾಗಿ ದೊರೆಯುತ್ತಿಲ್ಲ. ಪ್ರಮುಖವಾಗಿ ರೈತ ಸಂಪರ್ಕ ಕೇಂದ್ರಗಳ ಕೃಷಿ ಇಲಾಖೆ ಸಣ್ಣ ನೀರಾವರಿ ತೋಟಗಾರಿಕೆ ಇಲಾಖೆಗಳಲ್ಲಿ ರೈತರ ಬೇಡಿಕೆಗೆ ತಕ್ಕಂತೆ ಪೂರೈಕೆಯಾಗದೆ ಭ್ರಷ್ಟಾಚಾರಕ್ಕೂ ಇದು ಒಳಗಾಗುತ್ತಿದ್ದು ಇಂತಹ ಪರಿಸ್ಥಿತಿ ಕೂಡಾ ರೈತರನ್ನು ಕಂಗೆಡುಸುತ್ತವೆ.

**ವಲಸೆ ಹೋಗುವವರನ್ನು ತಡೆಯಲು ವಿಫಲವಾದ MGNREGA ಮತ್ತು ಫಸಲ್‌ಭೀಮಾ ಯೋಜನೆಗಳು**

ಗ್ರಾಮೀಣ ಕೃಷಿ ಕಾರ್ಮಿಕರಿಗೆ ಉದ್ಯೋಗ ಭದ್ರತೆ ನೀಡಿ ಆರ್ಥಿಕವಾಗಿ ಶಕ್ತಿ ತುಂಬಲು ಆ ಮೂಲಕ ಉದ್ಯೋಗ ಹರಸಿ ಬೇರೆ ಕಡೆಗಳಿಗೆ ವಲಸೆ ಹೋಗದಂತೆ ತಡೆಯಲು ಕೇಂದ್ರ ಸರ್ಕಾರ ಮಹಾತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೆ ತಂದಿದ್ದು ಸ್ಥಳೀಯ ಸರ್ಕಾರಗಳ ಸಹಭಾಗಿತ್ವದಲ್ಲಿ ಬಾಗಲಕೋಟೆ ಜಿಲ್ಲೆಯಾದ್ಯಂತ **MGNREGA** ಯೋಜನೆಯನ್ನು ಅಳವಡಿಸಲಾಗಿದ್ದರೂ ವಲಸೆ ಹೇಗುವುದನ್ನು ತಡೆಯಲು ಯೋಜನೆಯು ವಿಫಲವಾಗಿದೆ. ಜಿಲ್ಲೆಯಲ್ಲಿ ಹೆಚ್ಚತ್ತಿರುವ ಗ್ರಾಮೀಣ ಪ್ರದೇಶದ ರೈತರ ನಿರುದ್ಯೋಗ ಸಮಸ್ಯೆಯನ್ನು ಸಮರ್ಪಕವಾಗಿ ತಡೆಯುವಲ್ಲಿ ಯೋಜನೆ ವಿಫಲವಾಗುತ್ತದೆ ಕೆಲಸಕ್ಕಾಗಿನ ಬೇಡಿಕೆ ಹೆಚ್ಚಾಗುತ್ತಿದ್ದು ಯೋಜನೆಗೆ ಮೀಸಲಾದ ಹಣದ ಪ್ರಮಾಣ ಸಾಕಾಗುತ್ತಿಲ್ಲ ಎಂಬುದು ಒಂದೆಡೆಯಾದರೆ ಕಾರ್ಯಕ್ರಮದ ಅನುಷ್ಠಾನದಲ್ಲಿನ ಭ್ರಷ್ಟಾಚಾರವು ಯೋಜನೆಯ ವಿಫಲತೆಗೆ ಕಾರಣವಾಗಿದೆ. ಈ ಯೋಜನೆಯು ಪೂರ್ಣ ಪ್ರಮಾಣದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡರೆ ಕೃಷಿ ಕೂಲಿ ಕಾರ್ಮಿಕರ ವಲಸೆಯನ್ನು ತಪ್ಪಿಸಬಹುದಾಗಿದೆ.

ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಯ ಬಗ್ಗೆ ಸರಕಾರಗಳು ತಲೆಕಡೆಸಿಕೊಳ್ಳದಿರುವುದು ಕೃಷಿಯಿಂದ ಯುವಕರು ವಿಮುಖರಾಗಲು ಕಾರಣವಾಗಿದೆ. ಸೂಕ್ತ ಮಾರುಕಟ್ಟೆ ವ್ಯವಸ್ಥೆ ಇಲ್ಲದಿರುವುದು ಹಾಗೂ ಇರುವ ಮಾರುಕಟ್ಟೆ ವ್ಯವಸ್ಥೆಯ ಬಗ್ಗೆ ಪೂರ್ಣ ಪ್ರಮಾಣದ ಅರಿವಿಲ್ಲದಿರುವುದು ಮದ್ಯವರ್ತಿಗಳಿಗೆ ಮತ್ತು ಅಧಿಕಾರಿಗಳಿಗೆ ಅನುಕೂಲವಾಗುತ್ತಿದೆಯೇ ಹೊರತು ರೈತರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಈ ಯೋಜನೆಗಳು ಸಹಕಾರಿಯಾಗುತ್ತಿಲ್ಲದಿರುವುದು ಸಂಶೋಧನೆಯಲ್ಲಿ ಕಂಡು ಬಂದಿದೆ.

ಸರ್ಕಾರಿ ಕೃಷಿ ಯಂತ್ರೋಪಕಣಗಳ ಮೇಲೆ ನೀಡುವ ಸಬ್ಸಿಡಿ ನಿಜವಾದ ರೈತರಿಗೆ ಸಂಪೂರ್ಣವಾಗಿ ದೊರೆಯುವಂತಾಗಬೇಕು. ಆ ನಿಟ್ಟಿನಲ್ಲಿ ಸರ್ಕಾರಗಳು ಕ್ರಮ ಕೈಗೊಳ್ಳಬೇಕಾದ ಅನಿವಾರ್ಯತೆ ಉಂಟಾಗಿದೆ. ಸರ್ಕಾರ ಪ್ರತಿ ಗ್ರಾಮಗಳಿಗೂ ಪ್ರತಿನಿಧಿಗಳನ್ನು ಕಳುಹಿಸಿ ವಿವಿಧ ಇಲಾಖೆಗಳು, ಅಭಿವೃದ್ಧಿ ನಿಗಮಗಳು ಸೇರಿದಂತೆ ಸ್ಥಳಿಯ ಸರ್ಕಾರಗಳು ಹಾಗೂ ರಾಜ್ಯ ಮತ್ತು ಕೇಂದ್ರಸರ್ಕಾರಗಳ ಎಲ್ಲ ಕೃಷಿ ಮತ್ತು ಕೃಷಿ ಸಂಬಂಧಿತ ಯೋಜನೆಗಳ ಬಗ್ಗೆ ಗ್ರಾಮೀಣ ರೈತರಿಗೆ ಮಾಹಿತಿ ನೀಡಬೇಕು ಮತ್ತು ಗ್ರಾಮ ಮಟ್ಟದಲ್ಲಿಯೇ ಅರ್ಹ ರೈತರಿಂದ ಅರ್ಜಿ ಪಡೆದು ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂಬುದು ಬಾಗಲಕೋಟೆ ಜಿಲ್ಲೆಯ ರೈತರ ಅಭಿಪ್ರಾಯವಾಗಿದೆ. ಸರ್ಕಾರ ಆ ನಿಟ್ಟಿನಲ್ಲಿ ಕ್ರಮ ಕೈಗೊಂಡಾಗ ಮಾತ್ರ ವಲಸೆ ಹೋಗುತ್ತಿರುವ ರೈತಾಪಿ ಸಮೂಹದ ಯುವಕರನ್ನು ತಡೆದು ಕೃಷಿಯಲ್ಲಿ ತೊಡಗಿಸಿ ಗ್ರಾಮೀಣಾಭಿವೃದ್ಧಿಯ ಜೊತೆಗೆ ರೈತರ ಮತ್ತು ಗ್ರಾಮೀಣ ಪ್ರದೇಶದ ಆದಾಯವನ್ನು ಹೆಚ್ಚಿಸಬಹುದಾಗಿದೆ.

ಅತಿವೃಷ್ಟಿ ಅನಾವೃಷ್ಟಿಯ ಕಾಲದಲ್ಲಿ ರೈತರನ್ನು ಕೈಹಿಡಿಯಲು ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆ ಕೂಡಾ ಹಲವು ಲೋಪದೋಷಗಳನ್ನು ಹೊಂದಿದ್ದು ಭಾಗಲಕೋಟೆ ಜಿಲ್ಲೆಯಾದ್ಯಂತ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಯೋಜನೆಯನ್ನು ದುರಪಯೋಗ ಪಡಿಸಿಕೊಂಡು ರೈತರಿಗೆ ತಲುಪಬೇಕಾದ ವಿಮಾ ಮೊತ್ತಕ್ಕೆ ಕನ್ನಹಾಕುತ್ತಲಿವೆ. ಇದರ ಬಗ್ಗೆ ಅನೇಕ ದಿನಪತ್ರಿಕೆಗಳು ವರದಿ ಮಾಡಿದ್ದು ಬರ ಪರಿಹಾರ ಬೆಳೆಹಾನಿಯ ಸಂದರ್ಭದಲ್ಲಿ ನೀಡುವ ಪರಿಹಾರಗಳು

ರೈತರಿಗೆ ಸೇರದೆ ಅನ್ಯರ ಪಾಲಾಗುತ್ತಿರುವುದು ರೈತಾಪಿ ವರ್ಗಗಳ ಆತಂಕ ಹೆಚ್ಚಾಗುವಂತೆ ಮಾಡಿದೆ. ಆದ್ದರಿಂದ ಇಂತಹ ವಂಚನೆಗಳಿಂದ ರೈತರನ್ನು ಮುಕ್ತಿಗೊಳಿಸುವುದರ ಜೊತೆಗೆ ರೈತರು ಮತ್ತು ಕೃಷಿ ಕೂಲಿ ಕಾರ್ಮಿಕರ ಅಭಿವೃದ್ಧಿಗೆ ಸರ್ಕಾರ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದರೆ ಕಾರ್ಮಿಕರ ವಲಸೆಯನ್ನು ತಪ್ಪಿಸಬಹುದಾಗಿದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಹರಿಶ್ಚಂದ್ರ ದಿಗ್ಸಂಗೀಕರ್. (1999). *ಕನ್ನಡಿಗರ ಗೋವಾ ವಲಸೆ.* ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ.
- ಶಂಕರ್‌ರಾವ್ ಚ.ನ. (2014). *ಭಾರತದ ಗ್ರಾಮ ಸಮಾಜ ಮತ್ತು ಗ್ರಾಮೀಣ ಅಭಿವೃದ್ಧಿ.* ಜೈ ಭಾರತ ಪ್ರಕಾಶನ.
- ಶಂಕರ್, ಡಿ.ಎ. (ಸಂ.) (2016). *ನಮ್ಮ ಹಳ್ಳಿಗಳು.* ಸಂಹವನ ಪ್ರಕಾಶನ.
- Varsha Gowda, & Varsha Gowda. (2023, September 16). *Migrants struggle for dignity in cities of dreams*. Deccan Herald. https://www.deccanherald.com/specials/migrants-struggle-for-dignity-in-cities-of-dreams-2689540